ಕಡಲೆಕಾಯಿ

ನವೆಂಬರ್ ತಿಂಗಳಿನಲ್ಲಿ ಭತ್ತನೆ ಮಾಡುವುದರ ಮೂಲಕ ಅತ್ಯಧಿಕ ಇಳುವರಿಯನ್ನು ಪಡೆಯಬಹುದೆಂಬ ಅಂಶವನ್ನು ಗುರುತಿಸಲಾಗಿದೆ.

ತರಕಾರಿ

ಅಧಿಕ ಇಳುವರಿ ಸಿಹಿ ಗೆಣಸು (ಸಿ-48), ಪೂಸ ಜ್ವಾಲ ಮೆಣಸಿನಕಾಯಿ, ಪೂಸ, ಚೇತ್ಕಿ, ಮೂಲಂಗಿ, ಅಧಿಕ ಇಳುವರಿ ಹಾಗಲ, ಅಲಸುಂಡೆ, ಅಧಿಕ ಸಕ್ಕರೆ ಅಂಶವನ್ನು ಹೊಂದಿದ ಕಲ್ಲಂಗಡಿ (ಅರ್ಕ ಜ್ಯೋತಿ) ಯನ್ನು ಈ ಪ್ರಾಂತ್ಯದಲ್ಲಿ ಗುರುತಿಸಲಾಗಿದೆ.

ಇದಲ್ಲದೆ, ಭತ್ತದ ಆಧಾರಿತ ಬೆಳೆಯ ಪದ್ಧತಿಯನ್ನು ಹಾಗೂ ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು, ಗೇರುಬೀಜವನ್ನೊಳಗೊಂಡಂತೆ ತೋಟಗಾರಿಕೆ ಬೆಳೆಗಳು ಕಬ್ಬು ಮತ್ತು ಒಳನಾಡು ಮೀನುಗಾರಿಕೆಯಲ್ಲಿ ಸುಧಾರಿತ ತಾಂತರಿಕ ಸಂಶೋಧನೆಯನ್ನು ಮಾಡಲಾಗಿದೆ.

ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಪಡಿಸುವುದು

724 - ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಹಾರಾಷ್ಟ್ರ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಪಡಿಸಿರುವಂತೆ ಈ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಉಳಿದ ರಾಜ್ಯಗಳಿಗಿಂತ ಹಿಂದೆ ಬಿದ್ದಿರುವುದು ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಉತ್ತಮ ಮಟ್ಟದ ಬಿತ್ತನೆ ಬೀಜಗಳ ಅಭಾವ

396 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಉತ್ತಮ ಗುಣಮಟ್ಟದ ಬೀಜವು ಅಗತ್ಯಕ್ಕೆ ಸಾಕಾಗುವಷ್ಟು ಲಭ್ಯವಾಗದೆ ಇರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರೈತರು ಪ್ರಾಮಾಣೀಕೃತ ಬಿತ್ತನೆ ಬೀಜಗಳನ್ನು ಉತ್ಪಾದಿಸುವಲ್ಲಿ ಸರ್ಕಾರವು ಅವರಿಗೆ ಯಾವ ಸೌಲಭ್ಯಗಳನ್ನು ಒದಗಿಸಿದೆ.

ಇ) ರೈತರಿಗೆ ಪ್ರಾಮಾಣೀಕೃತ ಬಿತ್ತನೆ ಬೀಜಗಳನ್ನು ಸರಬರಾಜು ಮಾಡುವಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮವು ಕಳೆದ 3 ವರ್ಷಗಳಲ್ಲಿ ಯಾವ ಯೋಜನೆಯನ್ನು ರೂಪಿಸಿದೆ.

ಈ) ಮುಂಬರುವ ವರ್ಷಗಳಲ್ಲಿ ರಾಜ್ಯದ ರೈತರುಗಳಿಗೆ ಪ್ರಾಮಾಣೀಕೃತ ಬಿತ್ತನೆ ಬೀಜಗಳನ್ನು ಸುಲಭವಾಗಿ ದೊರೆಯುವಂತೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಅನುಸರಿಸಿದೆ?

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು):

ಅ) ಮಿತುಮಾನದ ಪ್ರಾರಂಭದಲ್ಲಿ ಹತ್ತಿ ಬೀಜದ ಕೊರತೆ ಸ್ವಲ್ಪ ಮಟ್ಟಿಗೆ ಮಾತ್ರ ಕಂಡು ಬಂದಿತ್ತು. ಅನಂತರ, ಇದರ ಪೂರೈಕೆಗೆ ವ್ಯವಸ್ಥೆ ಮಾಡಲಾಯಿತು.